W

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಮಮಅಇ/ಮಕ/03/2010-11

ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
1ನೇ ಮಹಡಿ, ಬಹುಮಹಡಿ ಕಟ್ಟಡ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-1,
ದಿನಾಂಕ:-17-06-2013.

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
ಎಲ್ಲಾ 30 ಜಿಲ್ಲೆಗಳು

ಮಾನ್ಯರೇ,

ವಿಷಯ:- ರಿಟ್ ಪಿಟಿಷನ್ ನಂ. 75559 OF 2013 (GM-RES) ನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿರುವ ಮಾಹಿತಿ ನೀಡುತ್ತಿರುವ ಕುರಿತು.

******

ವಿಷಯಕ್ಕೆ ಸಂಬಂಧಪಟ್ಟಂತೆ ಸೀಮಾ ಬೇಗಮ್ ತಂದೆ ಖಾಸಿಮ್ ಸಾಬ್, 16 ವರ್ಷ, ಕೊಪ್ಪಳ ಜಿಲ್ಲೆ ಇವರು ದಿನಾಂಕ 26-04-2013 ರಂದು ಸಲ್ಲಿಸಿದ್ದ ರಿಟ್ ಪಿಟಿಷನ್ ನಂ. 75559 OF 2013 (GM-RES) ದಲ್ಲಿ ಇವರು ತಾವು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದು, ಬಾಲ್ಯ ವಿವಾಹ ನಿಷೇಧ ಕಾಯ್ದೆ ಈ ಸಮುದಾಯಕ್ಕೆ ಅನ್ವಯಿಸುವುದಿಲ್ಲವೆಂದು ಮತ್ತು ಮುಸ್ಲಿಂ ಸಮುದಾಯದ ವೈಯುಕ್ತಿಕ ಕಾನೂನನ್ನು ಪರಿಗಣಿಸಿ, ವಿವಾಹ ಮಾಡುವುದಕ್ಕೆ ಅವಕಾಶ ಮಾಡಿಕೊಡುವಂತೆ ಕೋರಿ, ಕರ್ನಾಟಕ ಉಚ್ಚ ನ್ಯಾಯಾಲಯ, ಸರ್ಕ್ಯೂಟ್ ಬೆಂಚ್, ಧಾರವಾಡ ಇಲ್ಲಿ ಅರ್ಜಿ ಸಲ್ಲಿಸಿದ್ದರು.

ಘನ ನ್ಯಾಯಾಲಯವು ಸದರಿಯವರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದು, ಬಾಲ್ಯ ವಿವಾಹ ನಿಷೇಧ ಕಾಯ್ದೆಯ ಸೆಕ್ಷನ್ 1(2) ರ ಪ್ರಕಾರ ಬಾಲ್ಯ ವಿವಾಹ ನಿಷೇಧ ಕಾಯ್ದೆಯು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಭಾರತದ ಎಲ್ಲಾ ನಾಗರೀಕರಿಗೆ ಅನ್ವಯಿಸುತ್ತದೆಂದು ತಿಳಿಸಿ, ಪ್ರಕರಣವನ್ನು ವಜಾಗೊಳಿಸಿರುತ್ತಾರೆ. ಇದು ಎಲ್ಲಾ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಬಾಲ್ಯ ವಿವಾಹಗಳನ್ನು ತಡೆಯಲು ಸಹಕಾರಿಯಾಗಿದೆ. ಸದರಿ ತೀರ್ಪಿನ ಪ್ರತಿಯನ್ನು ಈ ಪತ್ರದೊಡನೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಗಳಿಗಾಗಿ ನೀಡಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ

ಸಹಿ/- 17/6/13
ನಿರ್ದೇಶಕರ ಪರವಾಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು.

<u>ಪ್ರತಿಯನ್ನು:-</u>
ಎಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.

ಖಾನಿಸಲು ಸ್ವೀಕರಿಸಲಾಗಿದೆ
ದಿನಾಂಕ 18-6-13

p/os(c)/Child marriage/CMP(stop)